## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಯು.ಬಿ.ವೆಂಕಟೇಶ್**
**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 600**

**ಉತ್ತರಿಸಬೇಕಾದ ದಿನಾಂಕ : 11.07.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಬಸವನಗುಡಿಯ ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನ ಅವ್ಯವಹಾರ ಹಗರಣವನ್ನು ಸಿ. ಬಿ. ಐ. ತನಿಖೆಗೆ ವಹಿಸಲಾಗಿದೆಯೇ: | ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಬೆಂಗಳೂರು ಈ ಸಹಕಾರಿಯಲ್ಲಿ ಜರುಗಿದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ವಿಚಾರಣೆಗಾಗಿ ಸಿಬಿಐ ಸಂಸ್ಥೆಗೆ ವಹಿಸುವ ಸಂಬಂಧ ನಿಬಂಧಕರಿಂದ ಸ್ವೀಕೃತವಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ ಒಳಾಡಳಿತ ಇಲಾಖೆಗೆ ಸಲ್ಲಿಸಲಾಗಿತ್ತು. ಒಳಾಡಳಿತ ಇಲಾಖೆಯು ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ/ದಾಖಲೆಗಳನ್ನು ಆಂಗ್ಲ ಭಾಷೆಯಲ್ಲಿ ಸಲ್ಲಿಸುವಂತೆ ಸೂಚಿಸಿದ್ದರ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ನಿಬಂಧಕರು, ನಿರ್ದೇಶಕರು, ಭಾಷಾಂತರ ಇಲಾಖೆ ಇವರಿಗೆ ಪತ್ರ ಬರೆದು ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿಕೊಡುವಂತೆ ಕೋರಿರುತ್ತಾರೆ. ಅನುವಾದ ಕಾರ್ಯ ಪ್ರಗತಿಯಲ್ಲಿದ್ದು, ಅನುವಾದ ಕಾರ್ಯ ಪೂರ್ಣಗೊಂಡ ನಂತರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಆ) | ವಹಿಸಿದ್ದಲ್ಲಿ, ಯಾವ ದಿನಾಂಕದಂದು ಸಿ.ಬಿ.ಐ. ಗೆ ವಹಿಸಲಾಗಿದೆ: ಸಿ.ಬಿ.ಐ. ಗೆ ನಿಗದಿಪಡಿಸಿರುವ ಕಾಲಮಿತಿ ಎಷ್ಟು: | |
| ಇ) | ಠೇವಣಿದಾರರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ಸರ್ಕಾರ ಕೈಗೊಂಡಿರುವ ದಿಟ್ಟ ಕ್ರಮಗಳೇನು? | ಠೇವಣಿದಾರರಿಗೆ ನ್ಯಾಯ ದೊರಕಿಸಿಕೊಡಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.<br>• ಶ್ರೀ ಗುರುರಾಘವೇಂದ್ರ ಸಹಕಾರ ಬ್ಯಾಂಕ್, ಬೆಂಗಳೂರು ಇಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸಿ. ಬಿ. ಐ. ತನಿಖೆಗೆ ವಹಿಸಲು ಕ್ರಮವಹಿಸಲಾಗುತ್ತಿದೆ. |
| | | • ಬ್ಯಾಂಕಿನ ಅವ್ಯವಹಾರದಲ್ಲಿ ಭಾಗಿಯಾಗಿದ್ದ, ಬ್ಯಾಂಕಿನ ಸಿಬ್ಬಂದಿ, ನಿರ್ದೇಶಕರು ಹಾಗೂ ಇತರ ಗ್ರಾಹಕರ ವಿರುದ್ಧ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ದೂರನ್ನು (ಎಫ್‌ಐಆರ್ ಸಂಖ್ಯೆ 37/2020) ದಾಖಲಿಸಲಾಗಿದೆ.<br>• ಸದರಿ ಮೊಕದ್ದಮೆಯು ಸಿ.ಐ.ಡಿ ಸಂಸ್ಥೆಗೆ ವರ್ಗಾವಣೆಯಾಗಿದ್ದು ತನಿಖೆಯು ಪ್ರಗತಿಯಲ್ಲಿರುತ್ತದೆ.<br>• ಈ.ಡಿ. ಬೆಂಗಳೂರು ಇಲ್ಲಿ ದೂರು (ECIR/BGZO/09/2020) ದಾಖಲಾಗಿದೆ. |

| | | |
|---|---|---|
| | | • ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರಡಿ ವಿಚಾರಣೆ ಜರುಗಿಸಲಾಗಿದೆ. ದಿನಾಂಕ:29-07-2022ರಂದು ಪ್ರಕರಣ 68ರಡಿ ಬ್ಯಾಂಕಿಗೆ ನಿರ್ದೇಶನ ನೀಡಲಾಗಿದೆ.<br><br>• ದಿನಾಂಕ:31-03-2023ರಲ್ಲಿ ಇದ್ದಂತೆ 37,351 ವೈಯಕ್ತಿಕ ಠೇವಣಿದಾರರ ರೂ.1392.94 ಕೋಟಿ ಹಾಗೂ 992 ಸಂಘ ಸಂಸ್ಥೆಗಳ ಠೇವಣಿ ಮೊತ್ತ ರೂ. 483.45 ಕೋಟಿ ಹೀಗೆ ಒಟ್ಟು ರೂ.1876.38 ಕೋಟಿಗಳಷ್ಟು ಠೇವಣಿ ಮೊತ್ತ ಬಾಕಿ ಇರುತ್ತದೆ.<br><br>• ದಿನಾಂಕ:10-01-2020 ರಂದು ಬ್ಯಾಂಕು 41,778 ಠೇವಣಾತಿದಾರರಿಗೆ ರೂ.2402.17 ಕೋಟಿ ಪಾವತಿಸಬೇಕಾಗಿತ್ತು. ಈ ಪೈಕಿ ಬ್ಯಾಂಕ್ ತನ್ನ ಸ್ವಂತ ನಿಧಿಯಿಂದ 42,597 ಮಂದಿಗೆ (ರೂ.1.00 ಲಕ್ಷ ಜೊತೆಗೆ ವೈದ್ಯಕೀಯ ವೆಚ್ಚ) ರೂ.233.49 ಕೋಟಿ ಮೊತ್ತವನ್ನು ಪಾವತಿಸಿರುತ್ತದೆ. ಡಿಐಸಿಜಿಸಿ ವಿಮಾ ಸಂಸ್ಥೆಯು 22,234 ಠೇವಣಿದಾರರಿಗೆ ರೂ.712.35 ಕೋಟಿ ಪಾವತಿಸಿರುತ್ತದೆ.<br><br>ಒಟ್ಟಾರೆ 41,778 ಠೇವಣಿದಾರರ ಪೈಕಿ 32,010 ಠೇವಣಾತಿದಾರರಿಗೆ ರೂ.332.39 ಕೋಟಿಯನ್ನು ಪಾವತಿಸಲಾಗಿದ್ದು, ಒಟ್ಟು ಠೇವಣಾತಿದಾರರ ಶೇ.78.62 ಠೇವಣಾತಿದಾರರಿಗೆ ಪೂರ್ಣ ಮೊತ್ತವನ್ನು ಪಾವತಿಸಲಾಗಿದೆ. |
| | | **ಸಾಲ ವಸೂಲಾತಿ :**<br>ದಿನಾಂಕ 10-01-2020 ರಿಂದ ಒಟ್ಟು ಸಾಲದ ವಸೂಲಾತಿ ಈ ಕೆಳಗಿನಂತಿವೆ: |

| ಕ್ರ. ಸಂ | ಅವಧಿ | ರೂ. (ಕೋಟಿಗಳಲ್ಲಿ) |
|---|---|---|
| 1 | 10-01-2020ರಿಂದ 31-03-2020 | 150.56 |
| 2 | 01-04-2020ರಿಂದ 31-03-2021 | 30.02 |
| 3 | 01-04-2021ರಿಂದ 31-03-2022 | 8.81 |
| 4 | 01-04-2022ರಿಂದ 30-06-2023 | 15.61 |
| | **ಒಟ್ಟು** | **205.00** |

ಕ್ರ. ಸಂ 1 ಕ್ಕೆ ಸಂಬಂಧಿಸಿದಂತೆ, ಬ್ಯಾಂಕಿನಲ್ಲಿನ ನಕಲಿ ಠೇವಣಿಗಳನ್ನು ಮುಚ್ಚುವ ಮೂಲಕ ಮತ್ತು ಬ್ಯಾಂಕಿನಲ್ಲಿನ ಮೋಸದ ಖಾತೆಗಳು ಹಾಗು ಆಂತರಿಕ ಜಿಎಲ್ ಗಳಿಗೆ ಡೆಬಿಟ್ ಮಾಡುವ ಮೂಲಕ ಮತ್ತು

| | | |
|---|---|---|
| | | ಮೂರನೇ ವ್ಯಕ್ತಿಯ ಠೇವಣಿಯನ್ನು ಸಾಲಗಾರನ ಖಾತೆಗೆ ಹೊಂದಿಸುವ ಮೂಲಕ ಸಾಲಗಳನ್ನು ವಸೂಲಿ ಮಾಡಲಾಗಿದೆ.<br><br>ಸಾಲವನ್ನು ಪಡೆದು ಸುಸ್ತಿಯಾಗಿರುವ 602 ಸಾಲದ ಖಾತೆಗಳಿಗೆ ಸಾಲವನ್ನು ಹಿಂದಿರುಗಿಸಲು ಸೂಚಿಸಿ ನೋಟೀಸ್ ನೀಡಲಾಗಿದ್ದು ಉಳಿದ ಸಾಲಗಾರರಿಗೆ ನೋಟೀಸ್ ಕಳುಹಿಸುವ ಕಾರ್ಯವು ಪ್ರಗತಿಯಲ್ಲಿದೆ.<br><br>ಅವಧಿಯೊಳಗೆ ಹಿಂದಿರುಗಿಸದ 83 ಸುಸ್ತಿದಾರರಿಗೆ, ಸರ್ಫೇಸಿ ಕಾಯ್ದೆ ಕಲಂ 13 (2)ರಡಿಯಲ್ಲಿ ಸರ್ಫೇಸಿ ನೋಟೀಸ್ ಜಾರಿಗೊಳಿಸಲಾಗಿದೆ. ನೋಟೀಸ್ ಹಿಂದಿರುಗಿದ 12 ಖಾತೆಗಳಿಗೆ ಸಂಬಂಧಿಸಿದಂತೆ ಪತ್ರಿಕಾ ಪ್ರಕಟಣೆಯನ್ನು ನೀಡಿ ಸ್ವಾಧೀನ ನೋಟೀಸ್‌ನ್ನು ನೀಡಲಾಗಿದೆ ಕೆ.ಸಿ.ಎಸ್ ಕಾಯ್ದೆ 1959 ಕಲಂ 70 ರಡಿಯಲ್ಲಿ ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಇವರಲ್ಲಿ 30 ಸಾಲದ ಖಾತೆಗಳ ಸುಸ್ತಿದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.<br><br>ಶ್ರೀ ಸಂತೋಷ್ ಕುಮಾರ್ ಎ, ಬ್ಯಾಂಕಿನ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಶ್ರೀ ಗಣಪತಿ ಎಲ್ ಹೆಗ್ಡೆ, ಮಾಜಿ ಕಿರಿಯ ಸಹಾಯಕ ಹಾಗೂ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಸಹಚರರಾದ ಶ್ರೀ ಸುಧೀರ್ ಬಾಬು ಟಿ ಹಾಗೂ ಶ್ರೀ ಚೇತನ್ ಕುಮಾರ್ ಆರ್ ರವರ ವಿರುದ್ಧ ಮಾನ್ಯ ಸಹಕಾರ ಸಂಘಗಳ ನಿಬಂಧಕರ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ಬ್ಯಾಂಕಿನ ಹಣವನ್ನು ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಆಸ್ತಿ ಖರೀದಿಸಿರುವುದಕ್ಕಾಗಿ ಸದರಿಯವರ ವಿರುದ್ಧ ಆದೇಶಪೂರ್ವ ಜಪ್ತಿ ಆದೇಶಕ್ಕಾಗಿ (Attachment before judgement) ಹೊರಡಿಸಲು ದಾವಾ ಅರ್ಜಿಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರ (ಪಟ್ಟಣ ಬ್ಯಾಂಕುಗಳ ವಿಭಾಗ) ನ್ಯಾಯಾಲಯದಲ್ಲಿ ದಾಖಲಿಸಿದ್ದು, ಜಂಟಿ ನಿಬಂಧಕರ ನ್ಯಾಯಾಲಯವು ದಾವಾ ಅರ್ಜಿಯನ್ನು ಪುರಸ್ಕರಿಸಿದ್ದು, ಮೇಲೆ ತಿಳಿಸಿರುವ ಆಸ್ತಿಗೆ ಸಂಬಂಧಿಸಿದಂತೆ ಆದೇಶಪೂರ್ವ ಜಪ್ತಿ ಆದೇಶವನ್ನು ಹೊರಡಿಸಿದೆ. ಸದರಿ ಆದೇಶದ ದೃಢೀಕೃತ ಪ್ರತಿಯನ್ನು ಉಪನೋಂದಣಾಧಿಕಾರಿ, ದೇವನಹಳ್ಳಿ ಮತ್ತು ತಹಶಿಲ್ದಾರ್, ದೇವನಹಳ್ಳಿ ತಾಲ್ಲೂಕು ರವರಿಗೆ ಜಾರಿ ಮಾಡಲಾಗಿದೆ. |

**ಸಂಖ್ಯೆ: ಸಿಒ 38 ಸಿಆರ್‌ಸಿ 2023**

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು